# ಸುಗ್ರಾಮ

## ಗ್ರಾಮ ಪಂಚಾಯತ್ ಚುನಾಯಿತ ಮಹಿಳಾ ಪ್ರತಿನಿಧಿಗಳ ಸಂಘ- ಕರ್ನಾಟಕ (ರಿ)

ಇವರಿಗೆ, 19ನೇ ಮಾರ್ಚ್ 2022

ಶ್ರೀ. ಬಸವರಾಜ ಬೊಮ್ಮಾಯಿ,

ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು

**ಇವರ ಮೂಲಕ:** ಶ್ರೀ.ಡಿ.ಎಸ್.ಸುರೇಶ್, ಸನ್ಮಾನ್ಯ ಶಾಸಕರು, ತರೀಕೆರೆ ವಿಧಾನಸಭಾ ಕ್ಷೇತ್ರ, ತರೀಕೆರೆ.

ಮಾನ್ಯರೇ,

ಸುಗ್ರಾಮ – ಗ್ರಾಮ ಪಂಚಾಯತ್ ಚುನಾಯಿತ ಮಹಿಳಾ ಪ್ರತಿನಿಧಿಗಳ ಸಂಘ- ಕರ್ನಾಟಕದ ವತಿಯಿಂದ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇವೆ. ಒಬ್ಬ ನಿಷ್ಠಾವಂತ, ದಕ್ಷ ರಾಜಕಾರಣಿಯು ಮುಖ್ಯಮಂತ್ರಿಯಾಗಿರುವುದು ಕರ್ನಾಟಕದ ಹಿರಿಮೆಯಾಗಿದೆ. ನಿಮ್ಮ ನಾಯಕತ್ವದಲ್ಲಿ ಇನ್ನೂ ಉತ್ತಮವಾದ ಆಡಳಿತ ನೀಡುತ್ತಿರುವುದು ಆಶಾದಾಯಕವಾಗಿದೆ.

ಸುಗ್ರಾಮ -ಗ್ರಾಮ ಪಂಚಾಯತ್ ಚುನಾಯಿತ ಮಹಿಳಾ ಪ್ರತಿನಿಧಿಗಳ ಸಂಘ**,** ಕರ್ನಾಟಕ**,** ಗ್ರಾಮ ಪಂಚಾಯತಿಯ ಚುನಾಯಿತ ಮಹಿಳಾ ನಾಯಕಿಯರ ಹಕ್ಕು ಮತ್ತು ಆಸಕ್ತಿಯನ್ನು ಪ್ರತಿನಿಧಿಸುವ ವೇದಿಕೆಯಾಗಿದೆ. ಈ ಎಲ್ಲಾ ಸದಸ್ಯರು ಸಂಘಟಿತಾತ್ಮಕವಾಗಿ ಬದಲಾವಣೆಯನ್ನು ತರಲು ಮತ್ತು ಉತ್ತಮ ನೀತಿ/ನಿಯಮಾವಳಿಗಾಗಿ ಪ್ರತಿಪಾದಿಸಲು ಮತ್ತು ಈ ನಿಯಮಾವಳಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಪರಸ್ಪರ ಬೆಂಬಲಿಸುವ ವೇದಿಕೆಯಾಗಿದೆ. ಈ ಸಂಘಟನೆಯು ಸದಸ್ಯತ್ವ ಆಧಾರಿತವಾಗಿದ್ದು, ಸುಗ್ರಾಮವನ್ನು 7 ಜಿಲ್ಲೆಗಳ 18 ತಾಲ್ಲೂಕುಗಳಲ್ಲಿ ರಚಿಸಲಾಗಿದ್ದು, 1500 ಕ್ಕೂ ಹೆಚ್ಚು ಚುನಾಯಿತ ಮಹಿಳಾ ಸದಸ್ಯರು ಇದರ ಭಾಗವಾಗಿದ್ದಾರೆ.

ಅಧಿಕಾರ ವಿಕೇಂದ್ರಿಕರಣದ ಆಶಯಗಳಿಗೆ ಅನುಗುಣವಾಗಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ ಮತ್ತು ಕಾರ್ಯಕ್ರಮಗಳನ್ನು ವರ್ಗಾಯಿಸುವಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದೆ ಮತ್ತು ಗ್ರಾಮ ಪಂಚಾಯತಿಗಳು 'ಜನಾಧಿಕಾರ ' ವನ್ನು ನೀಡುವಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ. ಕರ್ನಾಟಕವು ಈವರೆವಿಗೂ ಸ್ಥಳೀಯ ಸರ್ಕಾರದಲ್ಲಿ 6 ಚುನಾವಣೆಗಳನ್ನು ಕಂಡಿದ್ದು, ಉತ್ತಮ ಆಡಳಿತ ಮತ್ತು ವಿಕೇಂದ್ರೀಕರಣದಲ್ಲಿ ತರುವ ನಿಟ್ಟಿನಲ್ಲಿ ಸಾಕಾರಗೊಳಿಸಿದೆ. ಆದಾಗ್ಯೂ ಕೂಡ, ಕೆಲವು ಸಮಸ್ಯೆಗಳಿದ್ದು, ಅವುಗಳನ್ನು ಬಗೆಹರಿಸುವ ನಿಟ್ಟಿನಲ್ಲಿ, ಸುಗ್ರಾಮದ ಸದಸ್ಯರಾದ ನಾವು ಈ ಕೆಳಕಂಡ ಬೇಡಿಕೆಗಳನ್ನು ತಮ್ಮ ಅವಗಾಹನೆಗೆ ಸಲ್ಲಿಸುತ್ತಿದ್ದೇವೆ:

**ನೀತಿ/ನಿಯಮಗಳ ಅನುಷ್ಠಾನದ ಮಟ್ಟದಲ್ಲಿನ ಸಮಸ್ಯೆಗಳು:**

1. ಪಂಚಾಯತಿಗಳಿಗೆ ಹೆಚ್ಚುವರಿ *'ಅನಿರ್ಭಂದಿತ ಹಣ'* ವನ್ನು ನೀಡುವಂತೆ ತಮ್ಮ ಸರ್ಕಾರಕ್ಕೆ ಬೇಡಿಕೆ ಸಲ್ಲಿಸುತ್ತಿದ್ದೇವೆ.
2. ಗ್ರಾಮ ಪಂಚಾಯತಿ ಮಟ್ಟದಲ್ಲಿ *'ನಮ್ಮ ಗ್ರಾಮ, ನಮ್ಮ ಯೋಜನೆ'* ಅಡಿಯಲ್ಲಿ ತಗಲುವ ಬಜೆಟ್ ಅನ್ನು ಪ್ರತಿ ವರ್ಷ ನೀಡಬೇಕು.
3. ಸರ್ಕಾರದ ಉಲ್ಲೇಖದಂತೆ ತಿಳಿಸಿದ ಎಲ್ಲಾ ಇಲಾಖೆಗಳು ತಮ್ಮ ಕಾರ್ಯ ಯೋಜನೆಯನ್ನು *'ನಮ್ಮ ಗ್ರಾಮ, ನಮ್ಮ ಯೋಜನೆ'* ಪಟ್ಟಿಯಿಂದಲೇ (ಲಿಂಕ್ ಡಾಕ್ಯುಮೆಂಟ್) ತೆಗೆದುಕೊಳ್ಳಬೇಕು ಮತ್ತು ಫಲಾನುಭವಿಗಳನ್ನು ಗ್ರಾಮ ಸಭೆಗಳ ಮೂಲಕವೇ ಆಯ್ಕೆ ಆಗಬೇಕು.
4. ಭಾರತದ ಸರ್ವೋಚ್ಚ ನ್ಯಾಯಾಲಯವು ವಿಶಾಖ ತೀರ್ಪಿನನ್ವಯ ಗ್ರಾಮ ಪಂಚಾಯತಿ ಮಟ್ಟದಲ್ಲಿಯೂ ಕೂಡ ಲೈಂಗಿಕ ಕಿರುಕುಳ ದೂರು ಸಮಿತಿಗಳನ್ನು ರಚಿಸಿ, ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ಸರ್ಕಾರವು ಕೂಡಲೇ ಆದೇಶ ಹೊರಡಿಸಬೇಕಿದೆ.
5. ರಾಜ್ಯ ಸರ್ಕಾರವು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಪಂಚಾಯತಿ ಮಹಿಳಾ ಸದಸ್ಯರಿಗೆ ಒಂದು ಉಚಿತ ಸಹಾಯವಾಣಿಯನ್ನು ತೆರೆಯುವುದು. ಇದರಿಂದ ಸ್ಥಳೀಯ ಮಟ್ಟದ ಸರ್ಕಾರಗಳಲ್ಲಿನ ಚುನಾಯಿತ ಮಹಿಳೆಯರಿಗೆ ಪೋಲಿಸ್ ಬೆಂಬಲ, ಮಾಹಿತಿ, ಕಾನೂನು ರೀತ್ಯ ಸಹಾಯ, ಸಮಾಲೋಚನೆ, ಇತ್ಯಾದಿಗಳನ್ನು ಕೊಡಲು ಅನುವು ಮಾಡುವುದು.
6. ಸರ್ಕಾರವು ಅಭಿವೃದ್ಧಿ ಯೋಜನೆಗಳನ್ನು ಮಂಜೂರಾತಿ ಮಾಡುವ ಸಂದರ್ಭದಲ್ಲಿ, ಫಲಾನುಭವಿಗಳನ್ನು ಗ್ರಾಮ ಸಭೆಗಳ ಮೂಲಕವೇ ಆಯ್ಕೆ ಮಾಡುವುದನ್ನು ಕಡ್ಡಾಯಗೊಳಿಸಬೇಕು. ಮತ್ತು ಇದರ ಉಲ್ಲಂಘನೆಯಾದಲ್ಲಿ ಕ್ರಮ ತೆಗೆದುಕೊಳ್ಳಬೇಕು.
7. ಗ್ರಾಮ ಪಂಚಾಯತ್ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಅವಧಿಯನ್ನು ಕಳೆದ ಅವಧಿ (2015-2020) ಯಂತೆ ಐದು ವರ್ಷದ ಪೂರ್ಣ ಅವಧಿಗೆ ವಿಸ್ತರಣೆ ಮಾಡಬೇಕು.

ಪು.ತಿ.ನೋ..

**ಸಂಪರ್ಕ ವಿಳಾಸ: C/o ದಿ ಹಂಗರ್ ಪ್ರಾಜೆಕ್ಟ್, #214, ಯಶೋಧಾ ನಿಲಯ, 14 ಎ ಕ್ರಾಸ್ ರಸ್ತೆ, 2 ನೇ ಬ್ಲಾಕ್,**

**ಆರ್.ಟಿ. ನಗರ, ಬೆಂಗಳೂರು- 560 032 ದೂ: 080-23554580**

**ದೂ: ಶಾಂತಕುಮಾರಿ ಕೆ.ಸಿ., ಅಧ್ಯಕ್ಷರು- 9972994296; ಶಾರದಾ ದಳವಾಯಿ, ಕಾರ್ಯದರ್ಶಿ- 9448622214; ಮಹಾಲಕ್ಷ್ಮಿ. ಎಂ., ಖಜಾಂಚಿ- 8277631936**

8. ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ವಾರ್ಡ್ ಸದಸ್ಯರ ಗೌರವಧನವನ್ನು ಹೆಚ್ಚಿಸುವುದು - ಅಧ್ಯಕ್ಷರಿಗೆ ರೂ. 10,000/- ರೂ. ಉಪಾಧ್ಯಕ್ಷರಿಗೆ ರೂ. 9000/- ಮತ್ತು ವಾರ್ಡ್ ಸದಸ್ಯರಿಗೆ ರೂ. 8000/- ದಷ್ಟು ಹೆಚ್ಚಿಸುವುದು ಹಾಗೂ ಹಾಲಿ ನೀಡುತ್ತಿರುವ ಗೌರವಧನವನ್ನು ಪ್ರತಿ ಸದಸ್ಯರ ಬ್ಯಾಂಕ್ ಖಾತೆಗಳಿಗೆ ನಿಯಮಿತವಾಗಿ ಪಾವತಿಯಾಗುವಂತೆ ಕ್ರಮ ಕೈಗೊಳ್ಳುವುದು.
9. ಗ್ರಾಮ ಪಂಚಾಯಿತಿ ಸದಸ್ಯರು ಅದರಲ್ಲೂ ಮಹಿಳೆಯರಿಗೆ ತಾಲ್ಲೂಕು ಇಲಾಖೆಗಳನ್ನು ಭೇಟಿನೀಡಲು ತಿಂಗಳಿಗೆ ಸ್ವಲ್ಪ ಪ್ರಯಾಣ ಭತ್ಯೆಯನ್ನು ನೀಡುವುದಕ್ಕೆ ಬಜೆಟ್ ನಲ್ಲಿ ಹಣ ಮೀಸಲಿಡುವುದು.

**ಸ್ಥಳೀಯ ಸಮಸ್ಯೆಗಳು:**

10. ಮಲೆನಾಡಿಗೆ ಪ್ರತ್ಯೇಕ ಕಾನೂನು ವ್ಯವಸ್ಥೆ ಮಾಡಬೇಕು.
11. ಜಾಗದ ಅಸೆಸ್‌ಮೆಂಟ್ ನಂಬರ್ ಆಧಾರದ ಮೇಲೆ ಮನೆಗಳನ್ನು ನೀಡಬೇಕು.
12. 94 ಸಿ ನಲ್ಲಿ ಮನೆಗಳ ಜಾಗದ ಹಕ್ಕು ಪತ್ರಕ್ಕೆ ಹಾಕಿರುವ ಅರ್ಜಿಗಳು ತಕ್ಷಣವೇ ಪರಿಶೀಲಿಸಿ ಹಕ್ಕು ಪತ್ರ ನೀಡಬೇಕು.
13. ಅರಣ್ಯಭೂಮಿ ಮತ್ತು ಇತರೇ ಭೂಮಿಯಲ್ಲಿ ಉಳಿಮೆ ಮಾಡಿದ ರೈತರು ಹಾಕಿರುವ ಅರ್ಜಿಗಳನ್ನು ಪರಿಶೀಲಿಸಿ ತಕ್ಷಣವೇ ಹಕ್ಕುಪತ್ರವನ್ನು ನೀಡಬೇಕು.
14. ತಾಲ್ಲೂಕು ಮಟ್ಟದಲ್ಲಿ ಮಹಿಳಾ ದೌರ್ಜನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ ಮಹಿಳಾ ಗುಂಪುಗಳು, ಸ್ಥಳೀಯ ಮಟ್ಟದಲ್ಲಿ ಮಹಿಳಾಪರ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಿರುವ ಸಂಘಟನೆಗಳನ್ನೊಳಗೊAಡ ನಿಗಾ ಗುಂಪುಗಳನ್ನು (ಮಾನಿಟರಿಂಗ್ ಗ್ರೂಪ್) ರಚಿಸಿ, ಈ ಗುಂಪುಗಳ ಮುಖೇನ ಮಹಿಳಾ ಹಕ್ಕುಗಳನ್ನು ರಕ್ಷಿಸುವುದು.
15. ಪ್ರತಿ ಗ್ರಾಮ ಪಂಚಾಯಿತಿಗಳಲ್ಲಿ ನಿವೇಶನ ರಹಿತ ಬಡಕುಟುಂಬಗಳ ಪಟ್ಟಿ ತಯಾರಾಗಿದ್ದು, ಈವರೆಗೆ ಇಂತಹ ಕುಟುಂಬಗಳಿಗೆ ನಿವೇಶನ ಒದಗಿಸುವ ಕೆಲಸವಾಗಿರುವುದಿಲ್ಲ. ಆದ್ದರಿಂದ ನಿವೇಶನ ರಹಿತ ಬಡಕುಟುಂಬಗಳಿಗೆ ನಿವೇಶನ ಒದಗಿಸಲು ಕ್ರಮಕೈಗೊಳ್ಳುವುದು.
16. ಪಶ್ಚಿಮಘಟ್ಟ ಅಭಯಾರಣ್ಯದಲ್ಲಿ ಬರುವ ಹಳ್ಳಿಗಳಾದ ******* ಜನರನ್ನು ಒಕ್ಕಲೆಬ್ಬಿಸಬಾರದು. ಅವರ ಭೂಮಿಯನ್ನು ಕಿತ್ತುಕೊಳ್ಳಬಾರದು.
17. ತೀರ ಹಿಂದುಳಿದ ಮತ್ತು ತಾಲ್ಲೂಕಿನಿಂದ ಕಟ್ಟ ಕಡೆಯ ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡಬೇಕು.
18. ಪಿ.ಡಿ.ಓ ಗಳ ಕೊರತೆ, ಪ್ರತಿ ಪಂಚಾಯಿತಿಗೂ ಪೂರ್ಣ ಅವಧಿ ಪಿ.ಡಿ.ಓ ಗಳ ನೇಮಕವಾಗಬೇಕು.
19. ಮೆಸ್ಕಾಂ (ಎಸ್ರೋ) ಬಾಕಿಯಿರುವ ಹಣವನ್ನು (ಗ್ರಾ.ಪಂ.ಗಳ) ಸರ್ಕಾರ ಭರಿಸಲು (2022 ಮಾರ್ಚವರೆಗೆ) ತುಂಬಿಸಿ NOC ಕೊಡಿಸಿರಿ.
20. ಗ್ರಾಮ ಪಂಚಾಯಿತಿ ಸಿಬ್ಬಂದಿಗಳಿಗೆ ಸರ್ಕಾರವೇ ಸಂಬಳ ಕೊಡಬೇಕು.
21. ಗ್ರಾಮ ಪಂಚಾಯಿತಿಗಳಲ್ಲಿ ವಿದ್ಯುತ್ ಕಂಬಗಳಿಗೆ ಬೀದಿ ದೀಪಗಳ ಬಿಲ್ ವ್ಯತ್ಯಯವಾಗದಂತೆ ಇರಲು ಟೈಮರ್‌ಗಳನ್ನು ಅಳವಡಿಸಿರಿ.
22. ಸಭಾ ಭತ್ಯೆ ಒಂದು ಸಭೆಗೆ 500/- ರೂಗಳನ್ನು ನಿಗಧಿ ಮಾಡಿಸಿರಿ.
23. MP & MLA ಸ್ಥಾನಗಳಿಗೂ 50% ಮೀಸಲಾತಿ ನಿಗಧಿಪಡಿಸಬೇಕು.
24. ಹೊಸ ತಾಲ್ಲೂಕುಗಳಿಗೆ ಕಡ್ಡಾಯವಾಗಿ ಎಲ್ಲಾ ಇಲಾಖೆಗಳು ಪ್ರಾರಂಭವಾಗಿ, ಕಾರ್ಯ ಆರಂಭಿಸುವಂತಾಗಬೇಕು.
25. ತರೀಕೆರೆ, ಕಡೂರು ಮತ್ತು ಮೂಡಿಗೆರೆ ತಾಲ್ಲೂಕುಗಳ ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಸಾರ್ವಜನಿಕ ಸ್ಮಶಾನಗಳು ಇರುವುದಿಲ್ಲ. ಅತೀ ತುರ್ತಾಗಿ ಅಂತಹ ಗ್ರಾಮ ಪಂಚಾಯಿತಿಗಳಿಗೆ ಸಾರ್ವಜನಿಕ ಸ್ಮಶಾನಕ್ಕಾಗಿ ಭೂಮಿ ಒದಗಿಸಲು ಕ್ರಮಕೈಗೊಳ್ಳುವುದು.
26. ಗೋಮಾಳ ಮತ್ತು ಕೆರೆ ಒತ್ತುವರಿ ಪ್ರದೇಶಗಳನ್ನು ತೆರವುಗೊಳಿಸುವ ಬಗ್ಗೆ ಶೀಘ್ರವಾಗಿ ಕ್ರಮ ಕೈಗೊಳ್ಳುವುದು.
27. ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡದವರಿಗೆ ಕೊಡುವ ಶೇ.25% ಹಣವನ್ನು ಹೆಚ್ಚಿಸುವ ಮತ್ತು ಬೇರೆ ಅಕೌಂಟ್ ನಲ್ಲಿ ಇಡುವ ವ್ಯವಸ್ಥೆ ಜಾರಿ ಮಾಡುವುದು.
28. ಮಹಿಳಾ ಸ್ವಸಹಾಯ ಸಂಘ ಮತ್ತು ಒಕ್ಕೂಟಕ್ಕೆ ನ್ಯಾಯಬೆಲೆ ಅಂಗಡಿಯ ಮಾಲೀಕತ್ವವನ್ನು ವಹಿಸಬೇಕು ಮತ್ತು ಸಹಾಯಧನ ನೀಡುವ ನಿಟ್ಟಿನಲ್ಲಿ ಯೋಚಿಸುವುದು.
29. ಮಹಿಳೆಯರಿಗೆ ಕೌಶಲ್ಯ ತರಬೇತಿ ನೀಡಲು ಅನುದಾನ ಹೆಚ್ಚಿಸುವುದು.
30. 9 & 11 ಹಾಗೂ 94 C ಸಮಸ್ಯೆ ಬಗೆಹರಿಸಿರಿ.
31. ಜಿಲ್ಲೆಯ ಎಲ್ಲಾ ತಾಲ್ಲೂಕಿಗೆ ಒಂದರಂತೆ ಮಹಿಳಾ ನರ್ಸಿಂಗ್ ಕಾಲೇಜ್ ಹೆಚ್ಚಿಸುವ ನಿಟ್ಟಿನಲ್ಲಿ ಬಜೆಟ್ ನಲ್ಲಿ ಹಣ ಮೀಸಲಿಡುವುದು.
32. ಅಂಗನವಾಡಿ ಆಹಾರ ತಯಾರಿಸುವ ಘಟಕದ ಉಸ್ತುವಾರಿಗೆ ಮಹಿಳೆಗೆ ಹೆಚ್ಚಿನ ಆದ್ಯತೆ ಮತ್ತು ಸಹಾಯಧನಕ್ಕಾಗಿ ಹಣ ಮೀಸಲಿಡುವುದು.
33. JOC (Job Oriented College)ಗಳು ತಾಲೂಕಿಗೆ ಒಂದು ಇರುವಂತೆ ನೀಡುವ ನಿಟ್ಟಿನಲ್ಲಿ ಬಜೆಟ್ಟಲ್ಲಿ ಹಣ ಇಡುವುದು.
34. NRLM ಕೊಡುವ ಸಹಾಯಧನವನ್ನು ಜಾಬ್ ಕಾರ್ಡ್ ನಲ್ಲಿ ಕೆಲಸ ಮಾಡಿದ ಮಹಿಳೆಗೆ ಮತ್ತು ಬಿಪಿಎಲ್ ಕಾರ್ಡ್ ಇರುವ ಮಹಿಳೆಗೆ ಬಜೆಟ್ ನಲ್ಲಿ ಹಣ ಇಡುವುದು
35. ಮಹಿಳಾ ರೈತರಿಗೆ ಹೆಚ್ಚಿನ ಸಹಾಯಧನ ಸಿಗುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವುದು.

ಸ್ಥಳೀಯ ಸರ್ಕಾರಗಳಲ್ಲಿ ಉತ್ತಮ ಆಡಳಿತ ಮತ್ತು ವಿಕೇಂದ್ರೀಕರಣ ತರುವ ನಿಟ್ಟಿನಲ್ಲಿ, ತಾವು ಈ ಮೇಲ್ಕಂಡ ಬೇಡಿಕೆಗಳನ್ನು ಪರಿಗಣಿಸಬೇಕೆಂದು ಸುಗ್ರಾಮದ ಸದಸ್ಯರಾದ ನಾವು ವಿನಂತಿಸಿಕೊಳ್ಳುತ್ತಿದ್ದೇವೆ.

ವಂದನೆಗಳೊಂದಿಗೆ,

ಇಂತಿ ತಮ್ಮ ವಿಶ್ವಾಸಿ,

ಅಧ್ಯಕ್ಷರು,                    ಕಾರ್ಯದರ್ಶಿ

ಸುಗ್ರಾಮ ಗ್ರಾ.ಪಂ. ಚುನಾಯಿತ ಮಹಿಳಾ ಸದಸ್ಯರ ಸಂಘ

ತರೀಕೆರೆ, ಚಿಕ್ಕಮಗಳೂರು ಜಿಲ್ಲೆ